ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

34

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 16/3/2021

**6 ತಿಂಗಳಲ್ಲಿ ಕ್ರಮ: ಮುಖ್ಯಮಂತ್ರಿ ಭರವಸೆ** 22 ದಿನಗಳ 2ಎ ಹೋರಾಟಕ್ಕೆ ಸದ್ಯಕ್ಕೆ ವಿರಾಮ

# ಪಂಚಮಸಾಲಿ ಧರಣಿ ಅಂತ್ಯ

**ಬೆಂಗಳೂರು:** ಪಂಚಮಸಾಲಿ - ಮೀಸಲಾತಿ ಹೋರಾಟ ಸಂಬಂಧ ಆರು ತಿಂಗಳಲ್ಲಿ ವರದಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ವಿಧಾನಸಭೆಯಲ್ಲಿ ಭರವಸೆ ನೀಡಿದ್ದು ಇದರ ಬೆನ್ನಲ್ಲೇ ತಮ್ಮ ಧರಣಿಯನ್ನು ಕೂಡಲ ಸಂಗಮ ಪಂಚಮಸಾಲಿ ಮಠಾಧೀಶ ಬಸವ ಜಯಮೃತ್ಯುಂಜಯ ಸ್ವಾಮಿ ಹಿಂತೆಗೆದುಕೊಂಡರು.

2 ಎ ಗೆ ಸೇರ್ಪಡೆ ಬೇಡಿಕೆ ಕುರಿತು ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಹಾಗೂ ನ್ಯಾಯಮೂರ್ತಿ ನೇತೃತ್ವದ ಸಮಿತಿಯಿಂದ ಆರು ತಿಂಗಳಲ್ಲಿ ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಸಿಎಂ, ಧರಣಿ ಅಂತ್ಯಗೊಳಿಸುವಂತೆ ಮನವಿ ಮಾಡಿದರು.

ನಂತರ ಬಸನಗೌಡ ಪಾಟೀಲ್ ಯತ್ನಾಳ್, ಸಚಿವ ಸಿ.ಸಿ.ಪಾಟೀಲ್, ಮಾಜಿ ಸಚಿವ ರೇಣುಕಾಚಾರ್ಯ ಅವರು ಸ್ಥಳಕ್ಕೆ ತೆರಳಿ ಸರ್ಕಾರದ ಸಂದೇಶವನ್ನು



ಸರ್ಕಾರದ ಸಂದೇಶವನ್ನು ಪಂಚಮಸಾಲಿ ಶ್ರೀಗಳಿಗೆ ಸಚಿವ ಸಿ.ಸಿ.ಪಾಟೀಲ್ ಹಾಗೂ ಶಾಸಕ ಯತ್ನಾಳ್ ತಲುಪಿಸಿದರು.

> **ಆರು ತಿಂಗಳೊಳಗೆ ಸ್ಪಷ್ಟ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಇದು ನಮಗೆ ಖುಷಿ, ಸಂತೋಷ ತಂದಿದೆ. ತಾತ್ಕಾಲಿವಾಗಿ ಪ್ರತಿಭಟನೆ ಕೈಬಿಡುತ್ತೇವೆ.**
>
> **• ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಪಂಚಮಸಾಲಿ ಪೀಠಾಧ್ಯಕ್ಷರು, ಕೂಡಲ ಸಂಗಮ**

ಜಯಮೃತ್ಯುಂಜಯ ಸ್ವಾಮಿಯವರಿಗೆ ತಲುಪಿಸಿದರು. ಇದಕ್ಕೆ ಒಪ್ಪಿಕೊಂಡ ಸ್ವಾಮೀಜಿ 22 ದಿನಗಳಿಂದ ನಡೆಸುತ್ತಿದ್ದ ತಮ್ಮ ಧರಣಿ ಅಂತ್ಯಗೊಳಿಸುತ್ತಿರುವುದಾಗಿ ಘೋಷಿಸಿದರು. ಆದರೆ, ಆರು ತಿಂಗಳಲ್ಲಿ ನಮ್ಮ ಬೇಡಿಕೆ ಈಡೇರದಿದ್ದರೆ ಮತ್ತೆ ಹೋರಾಟ ನಡೆಸಲಾಗುವುದು ಎಂದು ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ ಸಹ ನೀಡಿದರು.

ಸೋಮವಾರ ವಿಧಾನಸಭೆ ಕಲಾಪದಲ್ಲಿ ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ವಿಷಯ ಪ್ರಸ್ತಾಪಿಸಿದರು. ಆಗ ಸಿಎಂ ಯಡಿಯೂರಪ್ಪ ಪ್ರತಿಕ್ರಿಯಿಸಿ, ಮೀಸಲಾತಿ ಕೋರಿ ಸಾಕಷ್ಟು ಸಮುದಾಯಗಳು ಮನವಿ ಮಾಡಿದೆ. ಪತ್ರವನ್ನೂ ಕೊಟ್ಟಿವೆ. ಹೀಗಾಗಿ, ಹಿಂದುಳಿದ ವರ್ಗಗಳ ಆಯೋಗ ಹಾಗೂ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು. ▶ 7ನೇ ಪುಟಕ್ಕೆ

# ಪಂಚಮಸಾಲಿ ಧರಣಿ ಅಂತ್ಯ

**1ನೇ ಪುಟದಿಂದ ▶** ಇದಕ್ಕೆ ಯತ್ನಾಳ್ ಅವರು, ಹಿಂದುಳಿದ ವರ್ಗಗಳ ಆಯೋಗದ ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಿ, ನ್ಯಾಯಮೂರ್ತಿಯವರ ಸಮಿತಿ ವಿಚಾರ ಬೇಡ. ಕಾಲಮಿತಿಯಲ್ಲಿ ಕ್ರಮ ಬೇಕು ಎಂದು ಆಗ್ರಹಿಸಿದರು.

ಆಗ ಮಧ್ಯ ಪ್ರವೇಶಿಸಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು, ಸರ್ಕಾರದ ಸಮಿತಿ ರಚಿಸಿದೆ. ಆಯೋಗದ ವರದಿ ಸಹ ಪಡೆಯಲಾಗುವುದು, ಸಮಿತಿಯ ವರದಿಯನ್ನೂ ಪಡೆಯಲಾಗುವುದು. ಇಷ್ಟೇ ದಿನ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ಯತ್ನಾಳ್ ಅವರು ಒಪ್ಪದಿದ್ದಾಗ ಮುಖ್ಯಮಂತ್ರಿಯವರು ಆರು ತಿಂಗಳಲ್ಲಿ ವರದಿ ಪಡೆಯಲಾಗುವುದು ಎಂದು ಹೇಳಿದರು. ಆಗ, ಸುಮ್ಮನಾದ ಯತ್ನಾಳ್, ಮುಖ್ಯಮಂತ್ರಿಯವರ ಭರವಸೆಗೆ ಅಭಿನಂದನೆಗಳು. ಆರು ತಿಂಗಳಲ್ಲಿ ಕ್ರಮ ಆಗಲೇಬೇಕು. ಇಲ್ಲದಿದ್ದರೆ ಮತ್ತೆ ಹೋರಾಟ ಆರಂಭಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

> **ಸದನದಲ್ಲಿ ಉತ್ತರ ಬೇಕು ಎಂಬ ಬೇಡಿಕೆ ಇಟ್ಟಿದ್ದೆವು. ಆರು ತಿಂಗಳಲ್ಲಿ ಈ ಬಗ್ಗೆ ಸ್ಪಷ್ಟನೆ ದೊರೆಯಲಿದೆ. ನಾನು ಯಾರ ಏಜೆಂಟ್ ಅಲ್ಲ, ಬಿಜೆಪಿ ಕಾರ್ಯಕರ್ತ, ಪ್ರಧಾನಿ ನರೇಂದ್ರ ಮೋದಿ ಬೆಂಬಲಿಗ. ಯಾರ ಪರವಾಗಿ ನಿಲ್ಲಲು ನನಗೆ ಹುಚ್ಚು ಹಿಡಿದಿಲ್ಲ. ಭ್ರಷ್ಟಾಚಾರ ಹಾಗೂ ಕುಟುಂಬಶಾಹಿ ರಾಜಕೀಯದ ವಿರುದ್ಧ ನನ್ನ ಹೋರಾಟ ಮುಂದುವರಿಯಲಿದೆ.**
>
> • ಬಸನಗೌಡ ಪಾಟೀಲ್ ಯತ್ನಾಳ್

> **ಸಿಎಂ ಯಡಿಯೂರಪ್ಪರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಸಮಾಜದ ಎಲ್ಲಾ ವರ್ಗದ ಹಿತವನ್ನು ಸಿಎಂ ನೋಡಬೇಕಾಗುತ್ತದೆ. ನಮ್ಮ ಸಮಾಜದ ಪರವಾಗಿಯೂ ಕೆಲಸ ಮಾಡುತ್ತಾರೆ. ಇಂದಿಗೆ ಹೋರಾಟ ಕೊನೆಗೊಳಿಸಬೇಕೆಂದು ಮನವಿ ಮಾಡುತ್ತೇನೆ.**
>
> • ಸಿ.ಸಿ. ಪಾಟೀಲ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವ